ಮೊತ್ತ. ಆದರೆ ನನ್ನ ತಂದೆ ಕುಡಿಯುವುದು, ಇಸ್ಪೀಟು ಆಡುವುದರಲ್ಲಿಯೇ ಅದನ್ನು ಕಳೆದುಬಿಟ್ಟರು. ಆಗ ನನಗೆ ಹದಿಮೂರು ಹದಿನಾಲ್ಕು ವರ್ಷ ಇರಬಹುದೇನೋ. ಆರು ತಿಂಗಳಾದ ಮೇಲೆ ಕಾಂಟ್ರಾಕ್ಟ್ ಮುಗಿಸಿ ವಾಪಸ್ ಬಂದೆ. ಮತ್ತೆ ನನ್ನ ಸ್ನೇಹಿತರೊಬ್ಬರು ನನ್ನನ್ನು ಹವ್ಯಾಸಿ ರಂಗಭೂಮಿಗೆ ಸೇರಿಸಿದರು. ಹಳ್ಳಿ ಹಳ್ಳಿಗಳಿಗೆ ಹೋಗಿ ನಾಟಕ ಮಾಡುತ್ತಿದ್ದೆವು.

◆ ನಿಮ್ಮ ನಟನಾಬದುಕಿಗೆ ತಿರುವು ಸಿಕ್ಕಿದ್ದು ಯಾವಾಗ?

'ಪ್ರಭಾತ್ ಶಿಶುವಿಹಾರ'ದಲ್ಲಿ. ಅಲ್ಲಿ ಚೌಡಪ್ಪ ರೆಡ್ಡಿ ಎನ್ನುವ ನಿರ್ದೇಶಕರಿದ್ದರು. ನೃತ್ಯರೂಪಕ ಮಾಡುತ್ತಿದ್ದರು. ಅದರಲ್ಲಿ ನಟಿಸಿದೆ. ತುಂಬ ಅದ್ಭುತವಾಗಿ ಮಾಡುತ್ತಿದ್ದರು. 'ಧರ್ಮಭೂಮಿ' ಎಂಬ ಒಂದು ನೃತ್ಯರೂಪಕವನ್ನು ಅವರೇ ಬರೆದಿದ್ದರು. ಅಷ್ಟರಲ್ಲಿ ಬಿ.ವಿ. ಕಾರಂತರು ಬೆಂಗಳೂರಿಗೆ ಬಂದರು. 'ಬೆನಕ' ಎಂಬ ನಾಟಕತಂಡ ಶುರುವಾಯಿತು. ಅವರ ನಿರ್ದೇಶನದ, ಚಂದ್ರಶೇಖರ ಕಂಬಾರರ ರಚನೆಯ 'ಜೋಕುಮಾರಸ್ವಾಮಿ' ನಾಟಕದಲ್ಲಿ ನಟಿಸಿದೆ. ಅದರಲ್ಲಿ ನನಗೆ ತುಂಬ ಖ್ಯಾತಿ ಸಿಕ್ಕಿಬಿಟ್ಟಿತು. ಕೆ.ಎಂ. ಶಂಕರಪ್ಪ ನಾಟಕ ನೋಡಲು ಬಂದಿದ್ದರು. ಅವರು ನನ್ನ ಪಾತ್ರ ನೋಡಿ ಮೆಚ್ಚಿ, ಅವರ ನಿರ್ದೇಶನದ 'ಮಾಡಿ ಮಡಿದವರು' ಸಿನಿಮಾದಲ್ಲಿ ಪಾತ್ರ ಕೊಟ್ಟರು.

◆ ನಿಮ್ಮ ಮತ್ತು ಲೋಕೇಶ್ ನಡುವೆ ಪ್ರೇಮ ಪಲ್ಲವಿಸಿದ್ದು ಹೇಗೆ?

ನಾನು ಪ್ರಭಾತ್ ಶಿಶುವಿಹಾರಕ್ಕೆ ಹೋಗ್ತಿದ್ನಲ್ಲ, ಅಲ್ಲೇ ನಾನು ಲೋಕೇಶ್ ಅವರನ್ನು ಹತ್ತಿರದಿಂದ ನೋಡಿದ್ದು. ಅಲ್ಲಿಯೇ ಒಂದು ಹುಡುಗಿ ಅವರನ್ನು ತುಂಬ ಇಷ್ಟಪಡ್ತಿದ್ಳು. ಆದ್ರೆ ಮದುವೆ ಮಾಡಿಕೊಳ್ಳೋಕೆ ಇಬ್ಬರ ಮನೆಯಲ್ಲಿಯೂ ಒಪ್ಪಿಗೆ ಇರಲಿಲ್ಲ. ಮೊದ್ಲೇ ಸೀರಿಯಸ್ ಆಗಿದ್ದ ಲೋಕೇಶ್ ಇನ್ನಷ್ಟು ಸೀರಿಯಸ್ ಆಗಿಬಿಟ್ಟರು. 'ಅಯ್ಯೋ, ಒಂದು ಹುಡುಗಿಗೆಲ್ಲ ನೀವು ಇಷ್ಟೊಂದು ತಲೆಕೆಡಿಸಿಕೊಳ್ತೀರಾ? ಅಯ್ಯೋ ಬಿಡ್ರೀ, ಅವಳು ಮಾಡಿಕೊಳ್ಳಲ್ಲ ಅಂದ್ರೇನು? ನಾನು ಮಾಡ್ಕೋತೀನಿ' ಎಂದು ತಮಾಷೆ ಮಾಡಿದ್ದೆ. ಲೋಕೇಶ್ ಅದನ್ನು ನಿಜ ಅಂದುಕೊಂಡುಬಿಟ್ಟಿದ್ದಾರೆ. ಎಷ್ಟೋ ದಿನಗಳ ನಂತರ, ನಾನು ಸಿನಿಮಾಗಳಲ್ಲಿಯೂ ನಟಿಸಲು ಶುರುಮಾಡಿದ ಮೇಲೆ ಒಂದು ದಿನ, 'ಯಾವಾಗ ಮದುವೆ ಮಾಡಿಕೊಳ್ಳೋಣ?' ಎಂದು ಕೇಳಿದರು. ನಾನು ಹೌಹಾರಿದೆ. 'ಮದ್ವೆನಾ? ಅಯ್ಯೋ ಇಲ್ಲಪ್ಪಾ... ನಾನು ಅವಾರ್ಡ್ಸ್ ಎಲ್ಲ ತಗೋಬೇಕು. ಅಲ್ಲಿವರೆಗೂ ಮದ್ವೆ ಗಿದ್ವೆ ಎಲ್ಲ ಆಗಲ್ಲ' ಎಂದುಬಿಟ್ಟೆ. 'ಸರಿ, ನಿಂಗೆ ಎರಡು ವರ್ಷ ಟೈಮ್ ಕೊಡ್ತೀನಿ. ಅಷ್ಟರಲ್ಲಿ ಏನು ಸಾಧನೆ ಮಾಡ್ತೀಯೋ ಮಾಡು' ಎಂದರು. ಆ ಎರಡು ವರ್ಷದಲ್ಲಿಯೇ ನಾನು ನಟಿಸಿದ 'ಅಬಚೂರಿನ ಪೋಸ್ಟ್ ಆಫೀಸು' ಸಿನಿಮಾಗೆ ರಾಷ್ಟ್ರಪ್ರಶಸ್ತಿ ಬಂತು. ಆ ಕಾರ್ಯಕ್ರಮಕ್ಕೆ ನಮ್ಮನ್ನೆಲ್ಲ ಕರೆಸಿದ್ದರು. ನಂತರ ಮದುವೆಯಾಗಲು ನಿರ್ಧರಿಸಿದೆವು.

ಮದುವೆ ದಿನದವರೆಗೂ ಮದುವೆ ಆಗತ್ತೋ ಇಲ್ಲವೋ ಅನ್ನೋ ಹೆದರಿಕೆ ಇದ್ದೇ ಇತ್ತು. ದಾವಣಗೆರೆಯಲ್ಲಿ 'ನಟರಂಗ' ತಂಡದ ಒಂದು ನಾಟಕ ಇತ್ತು. ಅಲ್ಲಿಗೆ ಹೋಗಿದ್ದಾಗ ಲೋಕೇಶ್, 'ಮುಂದಿನ ವಾರ ಫೆ. 2ರಂದು ನಿನ್ನ ಮದ್ವೆ ಮಾಡ್ಕೋಬೇಕು ಅಂದ್ಕೊಂಡಿದೀನಿ. ಏನ್ ಹೇಳ್ತೀಯಾ?' ಎಂದು ಕೇಳಿದರು. 'ಮುಂದಿನ ವಾರವೇ ಮದುವೆನಾ?' ಎಂದು ನನಗೆ ಗಾಬರಿ. ಆಮೇಲೆ ಅವರ ಪಾಡಿಗೆ ಅವರು ಹೋದರು. ನನಗೆ ಹರಿಹರದಲ್ಲಿ ನಾಟಕ ಇತ್ತು. ಅಲ್ಲಿಗೆ ಹೋದೆ. ಅಲ್ಲಿ ನನ್ನ ಸ್ನೇಹಿತೆಯೊಬ್ಬಳ ಬಳಿ ಈ ವಿಷಯ ಹೇಳಿಕೊಂಡು ಹೆದರಿಕೆ ಹಂಚಿಕೊಂಡೆ. ಅವಳು, 'ನೋಡು ಆದ್ರೆ, ಮದ್ವೆ ಆಗತ್ತೆ. ಇಲ್ದಿದ್ರೆ ನಾಟಕ ಆಗತ್ತೆ. ಏನೂ ಯೋಚ್ನೆ ಮಾಡ್ಬೇಡ' ಎಂದಳು. ಕಲಾವಿದರಿಗೆ ಮದುವೆ, ಮನೆ, ಮಕ್ಕಳು ಎಂದರೆ ಕಲ್ಲು ಹಾಕುವವರೇ ಜಾಸ್ತಿ. ಹಾಗಾಗಿ ತಾಳಿ ಕಟ್ಟುವವರೆಗೂ ನನ್ನ ಮದುವೆಯಾಗುತ್ತದೆ ಎಂಬ ನಂಬಿಕೆ ಇರಲೇ ಇಲ್ಲ ನನಗೆ.

ಅಂತೂ ಅಂದುಕೊಂಡ ಹಾಗೆ ನಮ್ಮ ಮದುವೆ ನಡೆಯಿತು. ಎಂಟೂವರೆಗೆ ಮದುವೆ ಆಯ್ತು. ಒಂಬತ್ತುಗಂಟೆಗೆ ಕಲಾಕ್ಷೇತ್ರಕ್ಕೆ ಹೋದ್ವಿ. ಹತ್ತುಗಂಟೆಗೆ 'ಕಾಕನ ಕೋಟೆ' ನಾಟಕ ಇತ್ತು. ಲೋಕೇಶ್ ತಂದೆ, ನಾನು ಮಗಳು ಆ ನಾಟಕದಲ್ಲಿ. ನಾಟಕ ಮುಗಿದಾಗ 'ಈ ನಾಟಕದಲ್ಲಿ ಅಪ್ಪ ಮಗಳ ಪಾತ್ರ ಮಾಡಿದವರು ಈವತ್ತಷ್ಟೇ ಗಂಡ ಹೆಂಡತಿ ಆಗಿದ್ದಾರೆ' ಎಂದು ಘೋಷಣೆ ಮಾಡಿದ್ರು. ಹೀಗೆ ನಮ್ಮ ದಾಂಪತ್ಯ ಜೀವನ ಶುರುವಾಯ್ತು.

◆ ಕೌಟುಂಬಿಕ ಜೀವನ ಹೇಗಿತ್ತು?

ಮದುವೆಯಾಗಿ ಲೋಕೇಶ್ ಮನೆಗೆ ಬಂದ ಮೇಲೆ 'ನನಗೆ ಡಾನ್ಸ್ ಮೇಲೆ ತುಂಬ ಆಸೆ ಇದೆ. ಡಾನ್ಸ್ ಕಲಿತುಕೊಳ್ಳುತ್ತೇನೆ' ಎಂದೆ. ಆ ಕುಟುಂಬದಲ್ಲಿ ಹದಿನೈದು ಜನ ಇದ್ದರು. 'ಮನೆಯಲ್ಲಿ ಈಗ ನೀನೇ ದೊಡ್ಡವಳು. ನೀನು ಡಾನ್ಸ್ ಅಂತೆಲ್ಲ ಹೊರಟರೆ ಮನೇನ ಯಾರು ನೋಡ್ಕೋತಾರೆ?' ಎಂದು ಲೋಕೇಶ್ ಕೇಳಿದರು. ಸರಿ ಎಂದು ನಾನು ಮನೆಯ ಜವಾಬ್ದಾರಿ ಹೊತ್ತುಕೊಂಡೆ.

ಆಗ ನನಗೆ ಅಡುಗೆ ಪಡುಗೆ ಏನೂ ಬರ್ತಿರ್ಲಿಲ್ಲ. ಲೋಕೇಶ್ ಅಕ್ಕ ಎಲ್ಲವನ್ನೂ ಹೇಳಿಕೊಟ್ಟರು. ನಾನು ಕಷ್ಟಪಟ್ಟು ಅನ್ನ ಮಾಡಿ ಲೋಕೇಶ್ ಅವರ ಚಿಕ್ಕಪ್ಪಂಗೆ ಬಡಿಸಿದರೆ ಅವರು, 'ಇಡ್ಲಿಗೆ ಸ್ವಲ್ಪ ಸಾಂಬಾರ್ ಹಾಕಮ್ಮಾ' ಎಂದು ನಕ್ಕರು. ಅನ್ನವೆಂಬುದು ಇಡ್ಲಿಯ ಹಾಗೆಯೇ ಆಗಿತ್ತು. ಇನ್ನು ಚಪಾತಿ ಮಾಡುವುದೆಂದರೆ ರಾಮ ರಾಮಾ... ಯಾಕಾದ್ರೂ ಚಪಾತಿ ಮಾಡಬೇಕಪ್ಪಾ ಎಂದು ಪರದಾಡುತ್ತಿದ್ದೆ. ಕೊನೆಯವರೆಗೂ ನನಗೆ ಸರಿಯಾಗಿ ಚಪಾತಿ ಮಾಡಲು ಬರಲೇ ಇಲ್ಲ. ಲೋಕೇಶ್ ಅವರಿಗೆ ಚಪಾತಿ ಪೂರಿ ಥರ ಉಬ್ಬಬೇಕು. ಅವರಿಲ್ಲ ಅಂದ್ರೆ ಚೆನ್ನಾಗೇ ಉಬ್ಬುತ್ತಿತ್ತು. ಅವರು ಬಂದು ನಿಂತಿದ್ದೇ ಉಬ್ಬದೇ ಚಪ್ಪೆ ಥರ ಆಗಿಬಿಡುತ್ತಿತ್ತು. 'ನೀನು ಬಿಡೇ' ಎಂದು ಹೇಳಿ ಅತ್ತೆಯನ್ನು ಕರೆಯುತ್ತಿದ್ದರು. 'ನಂಗೆರಡು ಚಪಾತಿ ಮಾತ್ರ ನೀನು ಮಾಡಿಕೊಡು' ಎಂದು ಅವರ ಬಳಿ ಮಾಡಿಸಿಕೊಂಡು ತಿನ್ನುತ್ತಿದ್ದರು. 'ಆಕ್ಟಿಂಗೂ ಬರಲ್ಲ, ಅಡುಗೆನೂ ಬರಲ್ಲ. ವೇಸ್ಟ್ ನೀನು' ಅಂತಾನೇ ಲೋಕೇಶ್ ಹೇಳುತ್ತಿದ್ದರು.

◆ ಮದುವೆ ಆದಮೇಲೆ 14 ವರ್ಷ ನಟನೆಯಿಂದ ದೂರವೇ ಉಳಿದುಬಿಟ್ಟಿರಿ. ಕಷ್ಟವೆನಿಸಲಿಲ್ಲವೇ?

ಆ ಪಾತ್ರವನ್ನೂ ಎಂಜಾಯ್ ಮಾಡುತ್ತಿದ್ದೆ ನಾನು. ಅಲ್ಲಿ ಹೋಗಿ ಮನೆ, ಮಕ್ಕಳು, ದೊಡ್ಡವರನ್ನೆಲ್ಲ ನೋಡಿಕೊಳ್ಳುವುದು, ಕುಟುಂಬದಲ್ಲಿ ಮದುವೆ, ಮುಂಜಿ, ಸಾವು ನೋವು ಎಲ್ಲವನ್ನೂ ಅನುಭವಿಸುತ್ತಿದ್ದೆ. ಬಹುಶಃ ಬದುಕನ್ನು ಬಂದ ಹಾಗೇ ಸ್ವೀಕರಿಸಿದ್ದಕ್ಕೇ ಇಲ್ಲಿಯವರೆಗೂ ಬಂದುಮುಟ್ಟಿದ್ದೇನೆ.

### ಹೆದರಿ ವಾಪಸ್ ಬಂದಿದ್ದೆ!

ಸುಬ್ಬಯ್ಯ ನಾಯ್ಡು ಅವರ ಕಂಪನಿಗೆ ನನ್ನ ಸೇರಿಸಬೇಕು ಎಂದು ನಮ್ಮ ತಂದೆ ಅಲ್ಲಿಗೆ ಒಮ್ಮೆ ಕರೆದುಕೊಂಡು ಹೋಗಿದ್ದರು. ನಾನು ಅವರ ದೊಡ್ಡ ಮೀಸೆ ನೋಡಿ ಹೆದರಿಕೊಂಡುಬಿಟ್ಟೆ. 'ಅಯ್ಯೋ, ಅಣ್ಣಾ ನನಗೆ ಅವರನ್ನು ನೋಡಿದ್ರೆ ಭಯ ಆಗತ್ತೆ. ನಾನು ಮಾಡಲ್ಲ' ಎಂದು ಹಟ ಮಾಡಿ ವಾಪಸ್ ಬಂದುಬಿಟ್ಟೆ. ಬಹುಶಃ ಕಂಪನಿಯಲ್ಲ, ಮುಂದೆ ಅವರ ಮನೆಯಲ್ಲಿಯೇ ಸೇರಿಕೊಳ್ಳುವುದಿದೆ ಎಂದು ತಪ್ಪಿಸಿರಬೇಕು. ಅವರು ತೀರಿಕೊಂಡಾಗ ನಾನು ಏಳನೇ ತರಗತಿಯಲ್ಲಿದ್ದೆ. ಅವರು ಮತ್ತೆ ಅವರ ಹೆಂಡತಿ ಇಬ್ಬರೂ ತೀರಿಕೊಂಡ ಸುದ್ದಿಕೇಳಿ ನಾನು, 'ನಾನೂ ಮದ್ವೆ ಆಗ್ತೀನಿ. ನನ್ ಗಂಡಾನೂ ಸತ್ತೋಗ್ಲಿ, ನಾನೂ ಅವರ ಜೊತೆ ಸತ್ತೋಗ್ತೀನಿ' ಎಂದು ಹೇಳ್ಕೋತಿದ್ದೆ. ಮಕ್ಕಳಾಟಿಕೆ ವಯಸ್ಸದು. ನಮ್ಮಣ್ಣ 'ಸುಮ್ನೆ ಕೂತ್ಕೊಳ್ಳೆ' ಎಂದು ತಲೆಮೇಲೆ ಮೊಟಕ್ತಿದ್ದ.



ಲೋಕೇಶ್ ಅವರು ನನಗೆ ಸರಳವಾಗಿ ಜೀವನ ನಡೆಸಲು ಕಲಿಸಿಕೊಟ್ಟರು. 'ಲೋಕು ಲೋಕು ನನಗೊಂದು ಸೀರೆ ಕೊಡ್ಸಿ' ಎಂದು ಕೇಳಿದರೆ, 'ನಿನ್ನತ್ರ ಸೀರೆ ಇಲ್ವಾ? ಹಾಗಿಲ್ವಾ ಹೀಗಿಲ್ವಾ?' ಅಂತೆಲ್ಲ ಪ್ರಶ್ನೆ ಕೇಳ್ತಿದ್ರು. ಕೊನೆಗೆ ನೂರು ರೂಪಾಯಿ ಕೊಡ್ತಿದ್ರು. ನಾನು ನೂರು ರೂಪಾಯಿ ಸೀರೆ ತೆಗೆದುಕೊಂಡು ಉಟ್ಟು ಸಂಭ್ರಮಿಸುತ್ತಿದ್ದೆ. ಲೋಕೇಶ್ ಸರಳವಾಗಿ ಬದುಕುವುದನ್ನು ಕಲಿಸಿದರೆ, ನನ್ನ ಮಗ ಸೃಜನ್ ಲಕ್ಷುರಿಯಾಗಿ ಬದುಕುವುದನ್ನು ತೋರಿಸಿದ. ಎರಡು ಲಕ್ಷ ರೂಪಾಯಿ ಸೀರೆ ತಂದುಕೊಟ್ಟಿದ್ದಾನೆ. ಅಂಥ ವ್ಯತ್ಯಾಸ ಏನಿಲ್ಲ; ಎಲ್ಲರೂ ಚೆನ್ನಾಗಿದೆ ಚೆನ್ನಾಗಿದೆ ಅಂತಾರೆ. ಅದೊಂದು ಖುಷಿ ಅಷ್ಟೆ.

◆ ಮತ್ತೆ ನಟನೆಗೆ ಬಂದಿದ್ದು ಹೇಗೆ?

ರಾಘವೇಂದ್ರ ರಾಜ್‌ಕುಮಾರ್ ಅವರ 'ಚಿರಂಜೀವಿ ಸುಧಾಕರ್' ಸಿನಿಮಾದಲ್ಲಿ ಪಾರ್ವತಮ್ಮ ಕರೆದರು ಎಂದು ಒಪ್ಪಿಕೊಂಡು ನಟಿಸಿದೆ. ನಂತರ ಪಾರ್ವತಮ್ಮ 'ನಂಜುಂಡಿ ಕಲ್ಯಾಣ' ಸಿನಿಮಾ ಮಾಡಲು ಕರೆಯುವಷ್ಟರಲ್ಲಿ,